2017 ಕ.ತೀ.ವ 1318

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್

## ಶ್ರೀ ಪ್ರತೀಕ್ ಜೈನ್ –ವಿರುದ್ಧ– ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ರಿಟ್ ಅರ್ಜಿಯಲ್ಲಿ, ಅರ್ಜಿದಾರರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಎಂ.ಬಿ.ಬಿ.ಎಸ್. ಕೋರ್ಸ್‌ನ 2ನೇ ವರ್ಷದ ಸೂಕ್ಷ್ಮ ಜೀವ–ವಿಜ್ಞಾನ ವಿಷಯದ ಪಠ್ಯ ಪತ್ರಿಕೆ–1 ಹಾಗೂ ಪಠ್ಯ ಪತ್ರಿಕೆ–2ಕ್ಕೆ ಸಂಬಂಧಿಸಿದಂತೆ ತಮ್ಮ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ಮೂರನೇ ಮೌಲ್ಯ ಮಾಪಕರನ್ನು ನೇಮಕ ಮಾಡುವಂತೆ ನಿರ್ದೇಶನ ಕೋರಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಅಧಿಸೂಚನೆಯಿಂದ ನೋಡಬಹುದಾದಂತೆ, ಪದವಿ ಕೋರ್ಸುಗಳ ಪಠ್ಯ ವಿಷಯಾಧಾರಿತ ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಎರಡು ಮೌಲ್ಯಮಾಪನಗಳ ನಡುವಿನ ಅಂಕಗಳ ಶೇಕಡಾವಾರಿನಲ್ಲಿನ ವ್ಯತ್ಯಾಸವು ಶೇಕಡಾ 15ಕ್ಕೆ ಸಮವಾಗಿದ್ದಲ್ಲಿ ಅಥವಾ ಅದನ್ನು ಮೀರಿದ್ದಲ್ಲಿ, ತರುವಾಯ, ಅಂಥ ಉತ್ತರ ಪತ್ರಿಕೆಗಳನ್ನು ಮೂರನೇ ಮೌಲ್ಯಮಾಪಕನಿಗೆ ಉಲ್ಲೇಖಿಸತಕ್ಕದ್ದು. ಎರಡೂ ಮೌಲ್ಯಮಾಪನಗಳ ನಡುವಿನ ಶೇಕಡಾವಾರಿನಲ್ಲಿನ ವ್ಯತ್ಯಾಸವನ್ನು, ಪ್ರತೀ ಇಬ್ಬರು ಮೌಲ್ಯಮಾಪಕರು, ಪ್ರತೀ ಪತ್ರಿಕೆಗೆ ನೀಡಿದ ಒಟ್ಟು ಅಂಕಗಳ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆಯೇ ಹೊರತು, ಪ್ರತೀ ಇಬ್ಬರು ಮೌಲ್ಯಮಾಪಕರು ಪ್ರತಿ ನಿರ್ದಿಷ್ಟ ಪ್ರಶ್ನೆಗೆ ನೀಡಿದ ಅಂಕಗಳನ್ನು ಆಧರಿಸಿ ಅಲ್ಲ.

ಪಠ್ಯಾಧಾರಿತ ಪ್ರಶ್ನೆ ಪತ್ರಿಕೆ–1 ಹಾಗೂ ಪಠ್ಯಾಧಾರಿತ ಪ್ರಶ್ನೆ ಪತ್ರಿಕೆ–2 – ಇವೆರಡೂ ತಲಾ 100 ಅಂಕಗಳನ್ನು ಒಳಗೊಂಡಿರುತ್ತವೆಂಬುದರಲ್ಲಿ ಯಾವುದೇ

*ರಿಟ್ ಅರ್ಜಿ ಸಂಖ್ಯೆ: 51352/2015 (ಇಡಿಎನ್–ಆರ್‌ಇಎಸ್), ದಿನಾಂಕ: 8ನೇ ಡಿಸೆಂಬರ್, 2015.

**ವಿವಾದವಿರುವುದಿಲ್ಲ. ಪಠ್ಯಾಧಾರಿತ ಪತ್ರಿಕೆ–1ಕ್ಕೆ ಮೊದಲ ಮೌಲ್ಯಮಾಪಕರು 34 ಅಂಕಗಳನ್ನು, ಎರಡನೇ ಮೌಲ್ಯಮಾಪಕರು 45.75 ಅಂಕಗಳನ್ನು ನೀಡಿರುತ್ತಾರೆ. ಪಠ್ಯಾಧಾರಿತ ಪತ್ರಿಕೆ–2ಕ್ಕೆ ಮೊದಲ ಮೌಲ್ಯಮಾಪಕರು 43 ಅಂಕಗಳನ್ನು, ಎರಡನೇ ಮೌಲ್ಯಮಾಪಕರು 49.75 ಅಂಕಗಳನ್ನು ನೀಡಿರುತ್ತಾರೆ. ಮೇಲೆ ಹೇಳಿದ ಅಂಕಗಳನ್ನು 100 ಅಂಕಗಳಿಗೆ ನೀಡಲಾಗಿರುತ್ತದೆ. ಹಾಗಾಗಿ, ಅವು ಪಡೆದುಕೊಂಡ ಶೇಕಡಾವಾರನ್ನು ಪ್ರತಿನಿಧಿಸುತ್ತದೆ. ಅದು ಹಾಗಿದ್ದಲ್ಲಿ, ಪ್ರತೀ ಎರಡೂ ಪತ್ರಿಕೆಗಳಲ್ಲಿಯೂ ಇಬ್ಬರು ಮೌಲ್ಯಮಾಪಕರ ನಡುವಿನ ಶೇಕಡಾವಾರಿನಲ್ಲಿನ ವ್ಯತ್ಯಾಸವು ಶೇ.15ಕ್ಕೆ ಸಮನಾಗಿರುವುದಿಲ್ಲ ಅಥವಾ ಶೇ.15ಕ್ಕೆ ಮೀರಿಯೂ ಇರುವುದಿಲ್ಲ. ಆದ್ದರಿಂದ, ಮೂರನೇ ಮೌಲ್ಯಮಾಪನಕ್ಕೆ ಸಂಬಂಧಿಸಿದ ಕೋರಿಕೆಯನ್ನು ಅಧಿಸೂಚನೆಯ ಪ್ರಕಾರ ಮನ್ನಿಸಲಾಗುವುದಿಲ್ಲವೆಂದು ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.**

ಅರ್ಜಿದಾರರ ಪರವಾಗಿ: ಶ್ರೀ ಪವನ್ ಚಂದ್ರ ಶೆಟ್ಟಿ, ವಕೀಲರು.
1 ಮತ್ತು 2ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಲೋಹಿತಾಶ್ವ ಬಣಕಾರ್, ವಕೀಲರು.
3ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀಮತಿ ಸುಮನ ಬಾಳಿಗ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ (ಮೌಖಿಕ):**

**1.** ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಎಂ.ಬಿ.ಬಿ.ಎಸ್. ಕೋರ್ಸ್‌ನ 2ನೇ ವರ್ಷದ ಸೂಕ್ಷ್ಮ ಜೀವ–ವಿಜ್ಞಾನ ವಿಷಯದ ಪಠ್ಯ ಪತ್ರಿಕೆ–1 ಹಾಗೂ ಪಠ್ಯ ಪತ್ರಿಕೆ–2ಕ್ಕೆ ಸಂಬಂಧಿಸಿದಂತೆ ತಮ್ಮ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ಮೂರನೇ ಮೌಲ್ಯ ಮಾಪಕರನ್ನು ನೇಮಕ ಮಾಡುವಂತೆ ನಿರ್ದೇಶನ ಕೋರಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ನಾನು ಪಕ್ಷಕಾರರ ಪರ ವಾದ ಮಾಡಿದ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿರುತ್ತೇನೆ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ.

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಿಶ್ವವಿದ್ಯಾಲಯವು ಆಯೋಜಿಸಿದ್ದ ಎಂ.ಬಿ.ಬಿ.ಎಸ್. ಕೋರ್ಸ್‌ನ ಪಠ್ಯದ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಇಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಿದ್ದು, ಇಬ್ಬರು ಮೌಲ್ಯಮಾಪಕರ ನಡುವಿನ ಶೇಕಡಾವಾರು ಮೌಲ್ಯಮಾಪನ ವ್ಯತ್ಯಾಸವು ಶೇ.15 ಕ್ಕಿಂತ ಹೆಚ್ಚಾದಲ್ಲಿ, ಆ ತರುವಾಯ ಅಂಥ ಉತ್ತರ ಪತ್ರಿಕೆಗಳನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 15.06.2012ನೇ ದಿನಾಂಕದ ಅಧಿಸೂಚನೆಯ ಮೇರೆಗೆ ಮೂರನೇ ಮೌಲ್ಯಮಾಪಕರಿಗೆ ಉಲ್ಲೇಖಿಸಬೇಕಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಎರಡೂ ಮೌಲ್ಯಮಾಪನಗಳ ನಡುವಿನ ವ್ಯತ್ಯಾಸವು ಎರಡೂ ಉತ್ತರ ಪತ್ರಿಕೆಗಳಲ್ಲಿ ಮೇಲೆ ಹೇಳಿದ ಶೇ.15 ರಷ್ಟು ವ್ಯತ್ಯಾಸವನ್ನು ಮೀರಿರುತ್ತದೆ. ಆದ್ದರಿಂದ, ಮೇಲೆ ಹೇಳಿದ ಅಧಿಸೂಚನೆಯ ಪ್ರಕಾರ ಮೂರನೇ ಮೌಲ್ಯಮಾಪಕರಿಗೆ ಎರಡೂ ಉತ್ತರ ಪತ್ರಿಕೆಗಳನ್ನು ಉಲ್ಲೇಖಿಸುವುದನ್ನು ಅಗತ್ಯಪಡಿಸಬೇಕಾಗಿರುತ್ತದೆಯೆಂದು ನಿವೇದಿಸಿರುತ್ತಾರೆ.

3. ಇಲ್ಲಿ ಉದ್ಭವವಾಗಿರುವ ಪ್ರಶ್ನೆಯನ್ನು ವಿವೇಚಿಸಲು ಮೇಲೆ ಹೇಳಿದ ಅಧಿಸೂಚನೆಯನ್ನು ಇಲ್ಲಿ ಉದ್ಧರಿಸುವುದು ಸೂಕ್ತವಾದುದಾಗಿರುತ್ತದೆ:

**"ಉಲ್ಲೇಖ:ಎಯುಟಿಎಚ್/III & ವಿ.ಮೌಲ್ಯಮಾಪನ/208/**
**2012-13, ದಿನಾಂಕ:15.06.2012**

**<u>ಅಧಿಸೂಚನೆ</u>**

.............................................................................................

**1. ಶೀರ್ಷಿಕೆ ಮತ್ತು ಆರಂಭ:**

(i) ಈ ಅಧ್ಯಾದೇಶವನ್ನು, "ಬಹು ಮೌಲ್ಯಮಾಪನ ನಿರ್ವಹಣಾ ಅಧ್ಯಾದೇಶ" ಎಂದು ಕರೆಯತಕ್ಕದ್ದು.

(ii) ಈ ಅಧ್ಯಾದೇಶವು, 15.06.2012 ರಂದು ಅಥವಾ ಆ ತರುವಾಯ ಪರೀಕ್ಷೆ ನಡೆಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:**

(i) **ಸಾಮಾನ್ಯ ಮೌಲ್ಯಮಾಪನ**–ಎಂದರೆ, ಪದವಿ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ಹೊಂದಿರುವ ಅಧ್ಯಾದೇಶದ ಪ್ರಕಾರ ನಡೆಸುವ ಎರಡು ಮೌಲ್ಯಮಾಪನಗಳು ಹಾಗೂ ಸ್ನಾತಕೋತ್ತರ ಕೋರ್ಸುಗಳ ಮೌಲ್ಯಮಾಪನವನ್ನು ನಿಯಂತ್ರಣ ಹೊಂದಿರುವ ಅಧ್ಯಾದೇಶದ ಪ್ರಕಾರ ನಡೆಸುವ ಎರಡು/ನಾಲ್ಕು ಮೌಲ್ಯಮಾಪನಗಳು. (ಅನ್ವಯವಾಗುವೆಡೆಗಳಲ್ಲಿ).

(ii) **ಮರು ಮೌಲ್ಯಮಾಪನ**–ಎಂದರೆ ಸಂದರ್ಭಾನುಸಾರ ಸಾಮಾನ್ಯ ಮೌಲ್ಯಮಾಪನದಲ್ಲಿ ಯಾವುದೇ ಎರಡು ಮೌಲ್ಯಮಾಪನಗಳ ನಡುವಿನ ವ್ಯತ್ಯಾಸವು >15% ಅಥವಾ >10% ಆಗಿರುವಲ್ಲಿ ಈ ಅಧ್ಯಾದೇಶದ ಪ್ರಕಾರ ಸಂದರ್ಭಾನುಸಾರವಾಗಿ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಿಗೆ ಸಂಬಂಧಿಸಿದಂತೆ 3ನೇ ಹಾಗು 5ನೇ ಪರೀಕ್ಷಕರು ನಡೆಸುವ ಮೌಲ್ಯಮಾಪನ.

**3. ಅನ್ವಯಿಕತೆ:**

ಈ ಅಧ್ಯಾದೇಶವು, ವಿಶ್ವವಿದ್ಯಾಲಯವು ನಡೆಸುವ ಪಠ್ಯಾಧಾರಿತ ಪತ್ರಿಕೆಗಳ ಪರೀಕ್ಷೆಗಳನ್ನು ಆಯೋಜಿಸುವ ಎಲ್ಲಾ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪಠ್ಯಪತ್ರಿಕೆಗಳಿಗೆ ಮಾತ್ರ ಅನ್ವಯವಾಗತಕ್ಕದ್ದು ಹಾಗೂ ಇದು ಮೌಖಿಕ/ಕ್ಲಿನಿಕಲ್/ ಪ್ರಾಯೋಗಿಕ ಪರೀಕ್ಷೆಗಳಿಗೆ ಅನ್ವಯವಾಗತಕ್ಕದ್ದಲ್ಲ. ಈ ಅಧ್ಯಾದೇಶವು ಪಿಹೆಚ್.ಡಿ. ಸೂಪರ್ ಸ್ಪೆಷಾಲಿಟಿ ಹಾಗೂ ಫೆಲೋಶಿಪ್ ಕಾರ್ಯಕ್ರಮಗಳ ಪರೀಕ್ಷೆಗಳಿಗೆ ಅನ್ವಯವಾಗುವುದಿಲ್ಲ.

4. ಬಹು ಮೌಲ್ಯಮಾಪನಕ್ಕೆ ಸಂಬಂಧಿಸಿದ ಕಾರ್ಯವಿಧಾನ:

(i) ಎರಡು ಭಾರಿಯ ಮೌಲ್ಯಮಾಪನಕ್ಕೆ ಒಳಗಾದಂಥ ಎಲ್ಲಾ ಉತ್ತರ ಪತ್ರಿಕೆಗಳನ್ನು, ಎರಡು ಬಾರಿ ಮಾಡಿದ ಮೌಲ್ಯಮಾಪನದ ನಡುವಿನ ವ್ಯತ್ಯಾಸವು ಶೇ.15 ರಷ್ಟನ್ನು ಮೀರಿದಲ್ಲಿ,

ಅನುಮೋದಿತ ಪ್ಯಾನಲ್‌ನಿಂದ ಕುಲಪತಿಯವರು ಆಯ್ಕೆ ಮಾಡಿ ನೇಮಕ ಮಾಡಿಕೊಂಡ ಮೂರನೇ ಪರೀಕ್ಷಕರಿಗೆ ಉಲ್ಲೇಖಿಸತಕ್ಕದ್ದು.

(ii) ನಾಲ್ಕು ಮೌಲ್ಯಮಾಪನಗಳಿಗೆ ಸಂಬಂಧಿಸಿದಂತೆ ಒಳಗೊಂಡಂಥ ಎಲ್ಲಾ ಉತ್ತರ-ಪತ್ರಿಕೆಗಳನ್ನು, ನಾಲ್ಕು ಬಾರಿ ಮಾಡಿದ ಮೌಲ್ಯಮಾಪನದ ವ್ಯತ್ಯಾಸವು >10%ನ್ನು ಮೀರಿದಲ್ಲಿ ಅನುಮೋದಿತ ಪ್ಯಾನಲ್‌ನಿಂದ ಕುಲಪತಿಗಳು ಆಯ್ಕೆ ಮಾಡಿ ನೇಮಕ ಮಾಡಿಕೊಂಡ ಐದನೇ ಪರೀಕ್ಷಕರಿಗೆ ಉಲ್ಲೇಖಿಸತಕ್ಕದ್ದು.

(iii) ಮೂರು ಮೌಲ್ಯಮಾಪನದ ಪೈಕಿ ಎರಡು ಉತ್ತಮ ಮೌಲ್ಯಮಾಪನದ ಸರಾಸರಿ ಅಂಕಗಳನ್ನು ಅಥವಾ ಐದು ಮೌಲ್ಯಮಾಪನದ ಪೈಕಿ ನಾಲ್ಕು ಉತ್ತಮ ಮೌಲ್ಯಮಾಪನದ ಸರಾಸರಿ ಅಂಕಗಳನ್ನು, ಸಂದರ್ಭಾನುಸಾರವಾಗಿ, ಫಲಿತಾಂಶದ ಅಂತಿಮ ಲೆಕ್ಕಾಚಾರ ಮಾಡುವುದಕ್ಕೆ ಪರಿಗಣಿಸತಕ್ಕದ್ದು.

(iv) ಈ ಅಧಿಸೂಚನೆಯನ್ನು ಪರಿಗಣಿಸಿದ ತರುವಾಯ ನೀಡಿದ ಅಂಕಗಳು ಹಾಗೂ ಘೋಷಿಸಿದ ಫಲಿತಾಂಶವು ಅಂತಿಮವಾಗಿರತಕ್ಕದ್ದು ಹಾಗು ಯಾವುದೇ ಸಂದರ್ಭಗಳಲ್ಲೂ ಹೆಚ್ಚಿನ ಮೌಲ್ಯಮಾಪನಕ್ಕೆ ಅವಕಾಶ ಮಾಡಿಕೊಡತಕ್ಕದ್ದಲ್ಲ.................................”

(ಒತ್ತು ಕೊಡಲಾಗಿದೆ)

4. ಮೇಲಿನ ಅಧಿಸೂಚನೆಯಿಂದ ನೋಡಬಹುದಾದಂತೆ, ಪದವಿ ಕೋರ್ಸುಗಳ ಪಠ್ಯ ವಿಷಯಾಧಾರಿತ ಉತ್ತರ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಎರಡು ಮೌಲ್ಯಮಾಪನಗಳ ನಡುವಿನ ಅಂಕಗಳ ಶೇಕಡಾವಾರಿನಲ್ಲಿನ ವ್ಯತ್ಯಾಸವು ಶೇಕಡಾ 15ಕ್ಕೆ ಸಮವಾಗಿದ್ದಲ್ಲಿ ಅಥವಾ ಅದನ್ನು ಮೀರಿದ್ದಲ್ಲಿ, ತರುವಾಯ, ಅಂಥ ಉತ್ತರ ಪತ್ರಿಕೆಗಳನ್ನು ಮೂರನೇ ಮೌಲ್ಯಮಾಪಕನಿಗೆ ಉಲ್ಲೇಖಿಸತಕ್ಕದ್ದು. ಎರಡೂ ಮೌಲ್ಯಮಾಪನಗಳ ನಡುವಿನ ಶೇಕಡಾವಾರಿನಲ್ಲಿನ ವ್ಯತ್ಯಾಸವನ್ನು, ಪ್ರತೀ ಇಬ್ಬರು

ಮೌಲ್ಯಮಾಪಕರು, ಪ್ರತೀ ಪತ್ರಿಕೆಗೆ ನೀಡಿದ ಒಟ್ಟು ಅಂಕಗಳ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆಯೇ ಹೊರತು, ಪ್ರತೀ ಇಬ್ಬರು ಮೌಲ್ಯಮಾಪಕರು ಪ್ರತಿ ನಿರ್ದಿಷ್ಟ ಪ್ರಶ್ನೆಗೆ ನೀಡಿದ ಅಂಕಗಳನ್ನು ಆಧರಿಸಿ ಅಲ್ಲ.

5. ಪಠ್ಯಾಧಾರಿತ ಪ್ರಶ್ನೆ ಪತ್ರಿಕೆ–1 ಹಾಗೂ ಪಠ್ಯಾಧಾರಿತ ಪ್ರಶ್ನೆ ಪತ್ರಿಕೆ–2 –ಇವೆರಡೂ ತಲಾ 100 ಅಂಕಗಳನ್ನು ಒಳಗೊಂಡಿರುತ್ತವೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಪಠ್ಯಾಧಾರಿತ ಪತ್ರಿಕೆ–1ಕ್ಕೆ ಮೊದಲ ಮೌಲ್ಯಮಾಪಕರು 34 ಅಂಕಗಳನ್ನು, ಎರಡನೇ ಮೌಲ್ಯಮಾಪಕರು 45.75 ಅಂಕಗಳನ್ನು ನೀಡಿರುತ್ತಾರೆ. ಪಠ್ಯಾಧಾರಿತ ಪತ್ರಿಕೆ–2ಕ್ಕೆ ಮೊದಲ ಮೌಲ್ಯಮಾಪಕರು 43 ಅಂಕಗಳನ್ನು, ಎರಡನೇ ಮೌಲ್ಯಮಾಪಕರು 49.75 ಅಂಕಗಳನ್ನು ನೀಡಿರುತ್ತಾರೆ. ಮೇಲೆ ಹೇಳಿದ ಅಂಕಗಳನ್ನು 100 ಅಂಕಗಳಿಗೆ ನೀಡಲಾಗಿರುತ್ತದೆ. ಹಾಗಾಗಿ, ಅವು ಪಡೆದುಕೊಂಡ ಶೇಕಡಾವಾರನ್ನು ಪ್ರತಿನಿಧಿಸುತ್ತದೆ. ಅದು ಹಾಗಿದ್ದಲ್ಲಿ, ಪ್ರತೀ ಎರಡೂ ಪತ್ರಿಕೆಗಳಲ್ಲಿಯೂ ಇಬ್ಬರು ಮೌಲ್ಯಮಾಪಕರ ನಡುವಿನ ಶೇಕಡಾವಾರಿನಲ್ಲಿನ ವ್ಯತ್ಯಾಸವು ಶೇ.15ಕ್ಕೆ ಸಮನಾಗಿರುವುದಿಲ್ಲ ಅಥವಾ ಶೇ.15ಕ್ಕೆ ಮೀರಿಯೂ ಇರುವುದಿಲ್ಲ. ಆದ್ದರಿಂದ, ಮೂರನೇ ಮೌಲ್ಯಮಾಪನಕ್ಕೆ ಸಂಬಂಧಿಸಿದ ಕೋರಿಕೆಯನ್ನು ಮೇಲೆ ಉದ್ಧರಿಸಿದ ಅಧಿಸೂಚನೆ ಪ್ರಕಾರ ಮನ್ನಿಸಲಾಗುವುದಿಲ್ಲ. ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

ಅರ್ಜಿ ವಜಾಗೊಂಡಿದೆ.